International Journal of Kannada Research
www.kannadajournal.com

ISSN: 2454–5813
IJKR 2021; 7(2): 110-112
© 2021 IJKR
www.kannadajournal.com
Received: 19-02-2021
Accepted: 21-03-2021

**Sathish Konaje**
Research Student,
Department of Sociology,
Mangalore University,
Karnataka, India

**Corresponding Author:**
**Sathish Konaje**
Research Student,
Department of Sociology,
Mangalore University,
Karnataka, India

# ಯಕ್ಷಗಾನ ಪ್ರಸಂಗಗಳಲ್ಲಿ ಕೌಟುಂಬಿಕ ಚಿತ್ರಣ

**Sathish Konaje**

## ಯಕ್ಷಗಾನ

ಪ್ರದರ್ಶನಾತ್ಮಕ ಕಲೆಯಾಗಿರುವ ಯಕ್ಷಗಾನವು ರಂಗಕಲೆಗಳಲ್ಲಿ ಅತ್ಯಂತ ಶ್ರೀಮಂತ ಕಲೆಯಾಗಿ ಗುರುತಿಸಲ್ಪಟ್ಟಿದೆ. ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿಬೆಳೆದ ಯಕ್ಷಗಾನ ಕಲೆಯು ನಮ್ಮ ಜನಜೀವನ ಹಾಗೂ ಸಂಸ್ಕೃತಿಯ ಒಂದು ಅಂಗವಾಗಿ ಬೆಳೆದುಬಂದಿವೆ. ಕರ್ನಾಟಕದಾದ್ಯಂತ ಪ್ರಾದೇಶಿಕ ಭೇದಗಳೊಡನೆ ಕಂಡು ಬರುವ ಈ ಯಕ್ಷಗಾನ ತನ್ನ ಎಲ್ಲಾ ವೈವಿಧ್ಯತೆಗಳೊಡನೆ ಕರಾವಳಿಯಲ್ಲಿ ಸಮೃದ್ಧವಾಗಿ ಬೆಳೆದು ಬಂದಿದೆ. ಕರ್ನಾಟಕದ ಕರಾವಳಿಯ ಜನರಿಗೆ ಯಕ್ಷಗಾನವೆಂದರೆ ತಮ್ಮ ಸಂಸ್ಕೃತಿಯ ಒಂದು ಅವಿಭಾಜ್ಯ ಪ್ರತೀಕ. ಈ ಮಣ್ಣಿನಲ್ಲಿ ಹುಟ್ಟಿಬೆಳೆದು ಸಮೃದ್ಧಗೊಂಡ ಕಲೆ ಇದಾಗಿದೆ.

ಕರಾವಳಿ ಜಿಲ್ಲೆ ಹಾಗೂ ಮಳೆನಾಡಿನಲ್ಲಿ ಒಂದು ಕಾಲದಲ್ಲಿ ಬಹುತೇಕ ಅನಕ್ಷರಸ್ಥರೇ ಆಗಿದ್ದ ಜನರನ್ನು ಸಾಂಸ್ಕೃತಿಕವಾಗಿ ಸಂಪನ್ನರಾಗಿಸುವಲ್ಲಿ ಯಕ್ಷಗಾನದ ಪಾತ್ರ ಮಹತ್ತ್ವದ್ದು. ಜನಸಾಮಾನ್ಯರಲ್ಲಿ ಉತ್ತಮ ವಿಚಾರಗಳು, ಪ್ರಾಮಾಣಿಕತೆ, ನೈಜತೆ ಹಾಗೂ ಧರ್ಮಪೂರಕವಾದ ನಡೆನುಡಿಗಳ ಹಿಂದೆ ರಾಮಾಯಾಣ, ಮಹಾಭಾರತದಂತಹ ಮಹಾಕಾವ್ಯಗಳ ಪ್ರಭಾವವೂ ಇರುತ್ತವೆ. ಹಾಗೆಯೇ ಕರ್ನಾಟಕದ ಕರಾವಳಿಯ ನೆಲದಲ್ಲಿ ಗೌರವ, ವಿಧೇಯತೆ, ನೆರವು, ಸಮಾಜಸೇವೆ. ಸೇವಾಮನೋಭಾವ, ವಿನಯ ಮೊದಲಾದ ಒಳ್ಳೆಯ ಗುಣಗಳು ಬೇರೂರಲು, ಬೆಳೆಯಲು ನಮ್ಮ ಯಕ್ಷಗಾನದ ಪಾತ್ರವು ಕೂಡಾ ಪ್ರಮುಖವಾಗಿದೆ ಎಂಬುವುದನ್ನು ನಾವು ಗುರುತಿಸಬಹುದಾಗಿದೆ.

## ಪ್ರಸಂಗ ಸಾಹಿತ್ಯದಲ್ಲಿ ಕೌಟುಂಬಿಕ ಅಂಶಗಳು:

ಯಕ್ಷಗಾನ ಪ್ರಸಂಗ ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಪುರಾಣಗಳಲ್ಲಿ ಹಾಗೂ ಹಲವು ಶತಮಾನಗಳ ಹಿಂದೆ ಇದ್ದಿರಬಹುದಾದ ಕುಟುಂಬ ವ್ಯವಸ್ಥೆಯ ಬಗೆಗೆ ಇರುವ ಹಲವಾರು ಸಂಗತಿಗಳು ದೊರೆಯುತ್ತವೆ. ಪ್ರಸಂಗ ಸಾಹಿತ್ಯದಲ್ಲಿರುವ ವಿವಿಧ ಕೌಟುಂಬಿಕ ಮಹತ್ವ ನೀಡುವ ಪಾತ್ರಗಳನ್ನು ರಂಗದಲ್ಲಿ ನಿಭಾಯಿಸಿ ಅದಕ್ಕೆ ವಿಶೇಷ ಮಾನ್ಯತೆ ಅಥವಾ ಅದನ್ನು ಸಮಾಜಕ್ಕೆ ತಲುಪಿಸುವ ಜವಬ್ದಾರಿಯುತ ಕೆಲಸವು ಕಲಾವಿದರದ್ದು ಆಗಿರುತ್ತದೆ. ಕಲಾವಿದರು ಪರಿಪೂರ್ಣನಾಗಿದ್ದಾಗ ಬಹುಬೇಗನೆ ಇದು ಪ್ರೇಕ್ಷಕ ವಲಯಕ್ಕೆ ಮುಟ್ಟಲು ಸಾಧ್ಯವಾಗುತ್ತದೆ. ಕಲಾವಿದನು ಪ್ರಸಂಗ ಸಾಹಿತ್ಯದ ಕೌಟುಂಬಿಕ ವಸ್ತು ವಿಷಯವನ್ನು ಜನರಲ್ಲಿ ತಲುಪಿಸುವ ಮಾಧ್ಯಮವಾಗಿ ನಿರೂಪಿತನಾಗುತ್ತಾನೆ.

ಯಕ್ಷಗಾನ ಪ್ರಸಂಗದಲ್ಲಿ ಕುಟುಂಬದ ಸಂಬಂಧ ಸಾಮರಸ್ಯಗಳನ್ನು ಈ ರೀತಿಯಾಗಿ ಗಮನಿಸಬಹುದು. ಒಂದು ಕುಟುಂಬದ ವ್ಯವಸ್ಥೆಯಲ್ಲಿ ತಂದೆ, ತಾಯಿ ಮಕ್ಕಳು ಮುಖ್ಯವಾದ ಘಟಕಗಳಾಗಿರುತ್ತಾರೆ. ಇವರಲ್ಲಿನ ಪರಸ್ಪರ ಸಂಬಂಧಗಳ ಚಿತ್ರಣವು ಕೌಟುಂಬಿಕ ಬದುಕಿನ ಚಿತ್ರಣವೇ ಆಗಿರುತ್ತದೆ. ಗಂಡ-ಹೆಂಡತಿ, ತಂದೆ-ಮಗ, ಅಣ್ಣ-ತಮ್ಮ, ಅತ್ತೆ-ಸೊಸೆ, ಅತ್ತಿಗೆ-ನಾದಿನಿ ಹೀಗೆ ಮೊದಲಾದ ಸಂಬಂಧಗಳ ನಡುವಿನ ಪ್ರೀತಿ, ಕಲಹಗಳು ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಗಮನಿಸಬಹುದಾಗಿದೆ. ಕವಿ ದೇವಿದಾಸ ಅವರು ಅಭಿಮನ್ಯು ಕಾಳಗ ಎಂಬ ಯಕ್ಷಗಾನ ಪ್ರಸಂಗದಲ್ಲಿ,

> ಶಿಶುವು ನೀನೆಲೆ ಮಗನೆ ಸಂಗರ ।
> ವಸದಳವು ಧುರುಧೀರ ಷಡುರಥ ।
> ರೆಸುಗೆಯುನು ನೀನೆಂತು ಸೈರಿಸಲಾಪೆ ಹೇಳೆಂದ ॥
> ಮಗನೇ ಕೇಳ್ ಕಾಲಾಗ್ನಿಯು ಹೊಗಬದುದಹಿಪನ ।
> ಝುಗಝುಗಿಸುವ ಪೆಡೆಯೊಳು ನಲಿದಾಡಬಹುದು ॥

ವಿಗಡ ಮೃತ್ಯುವಿನ ಬಾಯೊಳು ಹೊಕ್ಕು ಬರಬಹುದು ।
ಪೊಗುವಡಸಾಧ್ಯವು ಚಕ್ರವ್ಯೂಹವನು ॥
ಎಂತು ಪೋಪೆಯೊ ಮಗನೆ । ಚಕ್ರವ್ಯೂಹಕಿ ।
ನ್ನೆಂತು ಪೋಪೆಯೊ ಮಗನೆ ॥

ದ್ರೋಣಚಾರ್ಯರು ರಚಿಸಿದ ಚಕ್ರವ್ಯೂಹವನ್ನು ಬೇಧಿಸಲು ಹೊರಟು ನಿಂತ ಅಭಿಮನ್ಯುವಿಗೆ ರಣರಂಗದಲ್ಲಿ ಧೀರರಿಗೆ ಎದುರಾಗಿ ಹೋರಾಡುವ ಕಷ್ಟದ ಬಗೆಗೆ ಧರ್ಮರಾಯ ತಿಳಿಯ ಹೇಳುವ ರೀತಿಯನ್ನು ಕಾಣಬಹುದು. ಇಲ್ಲಿ ಯುದ್ದಕ್ಕೆ ಹೊರಟು ನಿಂತ ಅಭಿಮನ್ಯುವಿಗೆ ಆತನ ದೊಡ್ಡಪ್ಪ ಧರ್ಮರಾಯನ ಜವಾಬ್ದಾರಿಯುತ, ಮಗನ ಕಾಳಜಿಯ ಮಾತುಗಳನ್ನು ಗಮನಿಸಲು ಸಾಧ್ಯವಾಗಿದೆ.
ಶ್ರೀರಾಮ ಪಟ್ಟಾಭಿಷೇಕ ಪ್ರಸಂಗದಲ್ಲಿ ಶ್ರೀರಾಮ ವನವಾಸಕ್ಕೆ ಹೊರಟು ನಿಂತ ಸಂದರ್ಭದಲ್ಲಿ ದಶರಥನು ವಿಲಾಪಿಸುವ ಸನ್ನಿವೇಶವನ್ನು ಕವಿಯು ಈ ರೀತಿಯಲ್ಲಿ ವಿವರಿಸಿದ್ದಾರೆ.

ದುಷ್ಟಾತ್ಮ ನಾನಯ್ಯೊ । ಏಕೆನ್ನ ಜಠರದಿ ।
ಪುಟ್ಟಿದೆ ರಾಮಚಂದ್ರ । ರವಿಕೋಟಿ ಸಾಂದ್ರ॥
ಎಷ್ಟು ಹೇಳಿದರೇನು । ವಿಧಿಫಣೆಯೊಳು ಬರೆ ।
ದಿಟ್ಟುದಲ್ಲದೆ ಇವಳ । ನಿಷ್ಠುರವಲ್ಲ ॥

ರಾಮನು ವನವಾಸಕ್ಕೆ ಹೋಗುವ ಸಂದರ್ಭದಲ್ಲಿ ದಶರಥನು ತನ್ನ ಮಗನಲ್ಲಿ ಭಿನ್ನವಿಸುವ ರೀತಿ ಇದಾಗಿದ್ದು, ಇಲ್ಲಿ ತಂದೆಯು ತನ್ನ ಪ್ರೀತಿಯ ಮಗ ದೂರವಾಗುವ ಸನ್ನಿವೇಶದಲ್ಲಿ ಮೂಡುವ ಶೋಕದ ಚಿತ್ರಣವನ್ನು ಇಲ್ಲಿ ಕಾಣಬಹುದಾಗಿದೆ.

**ಕೌಟುಂಬಿಕ ಮೌಲ್ಯಗಳು, ರೀತಿ ನೀತಿಗಳು:**
ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಅನೇಕ ಕಡೆ ಕೌಟುಂಬಿಕ ಮೌಲ್ಯಗಳು, ರೀತಿ ನೀತಿಗಳು ಚಿತ್ರಿತವಾಗಿರುವುದನ್ನು ನಾವು ಗಮನಿಸಬಹುದಾಗಿದೆ. ಸಮಾಜದ ಕೌಟುಂಬಿಕ ವ್ಯವಸ್ಥೆ ಮತ್ತು ಹಿಂದಿನ ಸಮಾಜ ಜೀವನದ ಅನೇಕ ಮೌಲ್ಯಯುತ ವಿಚಾರಗಳು ಯಕ್ಷಗಾನದ ಹಲವಾರು ಕಡೆ ಹೆಣೆದುಕೊಂಡಿರುವುದನ್ನು ಕಾಣಬಹುದು. ಇದು ಒಂದು ರೀತಿಯಲ್ಲಿ ಸಮಾಜದ ಕೌಟುಂಬಿಕ ವ್ಯವಸ್ಥೆಯನ್ನು, ರೀತಿ ರಿವಾಜುಗಳನ್ನು ಸರಿಯಾದ ರೀತಿಯಲ್ಲಿ ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಕಂಡುಕೊಳ್ಳುವುದರ ಮುಖೇನ ಯಕ್ಷಗಾನವನ್ನು ನೋಡುವ ಪ್ರೇಕ್ಷಕರಿಗೆ ಯಕ್ಷಗಾನ ಮತ್ತು ಸಮಾಜ ಒಂದಕ್ಕೊಂದು ಪೂರಕವಾಗಿ ಕಾಣುತ್ತದೆ.
ಯಕ್ಷಗಾನದಲ್ಲಿರುವ ಕೆಲವು ರಾಮಾಯಣ ಪ್ರಸಂಗಗಳಲ್ಲಿ ಅವಿಭಕ್ತ ಕುಟುಂಬದ ಚಿತ್ರಣವು ನಮಗೆ ಕಾಣುತ್ತದೆ. ಯಾವಾಗಲೂ ಕುಟುಂಬವು ಪ್ರತಿಯೊಬ್ಬನ ವ್ಯಕ್ತಿತ್ವ ವಿಕಸನಕ್ಕೆ ಆ ಮೂಲಕ ಸಮಾಜದ ಆರೋಗ್ಯಕ್ಕೆ ದಾರಿ ದೀಪವಾಗುತ್ತದೆ. ನಮ್ಮ ಕುಟುಂಬದ ರಾಚನಿಕ ಸ್ವರೂಪವು ಸಮಾಜದ ಅನೇಕ ದೈನಿಕಗಳ, ರೀತಿ ನೀತಿಗಳ ನಿರ್ಧಾರಕ ಅಂಶವಾಗಿದೆ.
ಯಕ್ಷಗಾನದ ಹಲವಾರು ಪ್ರಸಂಗ ಸಾಹಿತ್ಯದಲ್ಲಿ ಕೌಟುಂಬಿಕ ವ್ಯವಸ್ಥೆಯ ಬಗೆಗಿನ ಅನೇಕ ಮೌಲಿಕ ವಿಚಾರಗಳು ಬಂದಿರುವುದನ್ನು ಗಮನಿಸಬಹುದಾಗಿದೆ. ಪಂಚವಟಿಯಲ್ಲಿ ಸೀತೆಯಾಡುವ ಮಾತುಗಳು, ಪ್ರಸಂಗದಲ್ಲಿ ಬರುವ ಸೀತೆ, ದಶರಥರ ನಡುವಿನ ಸಂಬಂಧ, ಒಬ್ಬ ಚಕ್ರವರ್ತಿ ಮತ್ತು ಆತನ ಜೇಷ್ಠ ಸೊಸೆಯ ನಡುವಿನ ಬಿಗುಮಾನಪೂರಿತ ಸಂಬಂಧದಂತಿಲ್ಲ. ಬದಲು ಒಬ್ಬ ಹಳ್ಳಿಯ ಹಿರಿಯ ಮತ್ತು ಆತನನ್ನು ಗೌರವಿಸಿ ಪ್ರೀತಿಸುವ ಹಿರಿಯ ಸೊಸೆಯೊಬ್ಬಳ ಸಂಬಂಧದಂತಿದೆ. ದಶರಥನ ಸಾವಿನ ಕುರಿತು ಸೀತೆಯಾಡುವ ಶೋಕದ ಮಾತುಗಳು ಹೀಗಿವೆ,

ಇನ್ನಾರೆನ್ನನು ಗುಣದಲಿ । ಮನ್ನಿಸಿ ಮನ್ನಿಸಿ ಕರೆವರು ।
ಕಣ್ಣಲಿ ಕಾ । ಣದೆ ಹೋಯಿತೆ । ಪುಣ್ಯವೆ ಹಾ । ವಿಧಿಯೇ ।
ಮಾವನ ಗುಣ । ವರ್ಣಿಸುವಡೆ । ಸಾವಿರ ಬಾ । ಯಿರಬೇಕು ।
ಯಾವರಿಗಿಂ । ಥಾ ಮನಸಿದೆ । ದೇವರಿಗೆ ಸ । ಮಾನ
ಎಷ್ಟರ ಸಂಕಟ ಪಟ್ಟನೊ । ಮಕ್ಕಳ ನೋಡುವೆನೆನುತಲಿ।
ಎಷ್ಟೆಮ್ಮನು । ಕರೆ ಕರೆದು । ಬಿಟ್ಟನೋ ಪ್ರಾ । ಣವನು
ಒಂದೇ ದಿನ । ವಾದರು ಮನ । ನೊಂದೆನ್ನೊಳು । ನುಡಿದರಿಯಾ
ತಂದೆ ತಾಯ್ಗ । ಳಾರಾದವವರು ಬಂದಪರೇ । ಹೀಗೆ
ಹೊತ್ತಲ್ಲದ । ಹೊತ್ತಿನಲಿ ನೃಪೋತ್ತಮನಳಿ । ದನೆ ಹಾಯೆನು
ತತ್ತೆಯ ಮೊಗ । ನೋಡುತ ಬಲು । ಅತ್ತಳು ಜನ । ಕಸುತೆ
ಒದಗುವರಾ । ಪತ್ತಿಗೆಂದು । ಮದುವೆಯ ಮಾ । ಡಿದ ಮಗನಿಗೆ
ತುದಿಗಾಲಕೆ । ನಾವಿದ್ದಿ । ಲ್ಲದ ಹಾಗಾ । ಯ್ತಲ್ಲ ॥

ಇಲ್ಲಿ ಸೀತೆ ಕುಟುಂಬದ ವ್ಯವಸ್ಥೆಯೊಂದರಲ್ಲಿ ಮಕ್ಕಳನ್ನು ಸಾಕುವುದರ ಹಿನ್ನೆಲೆಯಲ್ಲಿರುವ ಭಾವವನ್ನು ತಿಳಿಸಿದ್ದಾಳೆ. ಭಾರತೀಯ ಕುಟುಂಬಗಳಲ್ಲಿ ಮಕ್ಕಳನ್ನು ಸಾಕುವುದು, ಸಲಹುದು ತಂದೆಂತಾಯಿಯಂದಿರ ಕರ್ತವ್ಯ ಅಂತೆಯೇ ತಂದೆ ತಾಯಿಯರ ಕೊನೆಗಾಲಕ್ಕೆ ಅವರನ್ನು ನೋಡಿಕೊಳ್ಳುವುದು ಮಕ್ಕಳ ಕರ್ತವ್ಯ. ಈ ಕುಟುಂಬದ ಮೌಲ್ಯ ವ್ಯವಸ್ಥೆಯ ಬಗ್ಗೆ ಕಲಾವಿದ ತಮ್ಮ ಪಾತ್ರದ ಮೂಲಕ ಹೇಳುವ ಮಾತು ತೀರಾ ಸರಳವಾಗಿ ಕಂಡರೂ ಇದು ಸಮಾಜದ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.
ಸಮಾಜಶಾಸ್ತ್ರಜ್ಞರಾದ ಶ್ರೀ ಎಂ.ಎನ್.ಶ್ರೀನಿವಾಸ್ ತಮ್ಮ 'ರಿಮೆಂಬರಡ್ ವಿಲೇಜ್' ಎಂಬ ಕೃತಿಯಲ್ಲಿ ಕರ್ನಾಟಕದ ಗ್ರಾಮೀಣ ಪ್ರದೇಶವೊಂದರ ಕೌಟುಂಬಿಕ ವ್ಯವಹಾರಗಳ ಕುರಿತು `wealth and poverty were both transitory while moral rules were permanent' ಎನ್ನುತ್ತಾರೆ. ಯಕ್ಷಗಾನ ಪ್ರಸಂಗದ ಕವಿಗಳು ಇದೇ ಭಾವವನ್ನು ತಮ್ಮ ಪಾತ್ರಗಳ ಮೂಲಕ ಪ್ರಕಟಿಸಿದ್ದಾರೆ.
'ಸುಭದ್ರಾ ಕಲ್ಯಾಣ'ದಲ್ಲಿ ಸುಭದ್ರೆಯನ್ನು ಕೊಡುವ ವಿಚಾರದಲ್ಲಿ ವಸುದೇವ ದೇವಕಿಯರು ಇಂತಹದೇ ಅಭಿಪ್ರಾಯವನ್ನು ವ್ಯಕ್ತಪಡಿಸುವುದನ್ನು ನಾವು ಗಮನಿಸಬಹುದಾಗಿದೆ.

'ಸಹಜಾತೆಯಣುಗನಿಗೀಯದೆ ಮಿಕ್ಕಿನ
ಕುಹಕಿಗಳಿಗೆ ಹೆಣ್ಣ ಕೊಡುವೆವೆ ಮಗನೆ'

ಎಂಬಲ್ಲಿ ನೈತಿಕ ನಿಯಮಕ್ಕೆ ಒತ್ತು ಇದೆ. ಬಲರಾಮ 'ಕುಲವಂತ, ಬಲವಂತ, ಸಿರಿವಂತ, ಕುರುಕುಲ ತಿಲಕನಿಗೆಣೆಯಹರಾರು? ಎಂದರೂ ವಾಸುದೇವ ಒಪ್ಪುವುದಿಲ್ಲ. ತಿಳಿದು ಸೋದರಿಕೆಗೀವೆನು ಹೆಣ್ಣನು' ಎನ್ನುವುದನ್ನು ನಾವಿಲ್ಲಿ ಗಮನಿಸಬಹುದಾಗಿದೆ.
ಕವಿ ಡಿ.ಸದಾಶಿವ ಭಟ್ಟ ಅವರು 'ನಳಚರಿತ್ರೆ' ಪ್ರಸಂಗದಲ್ಲಿ ತಂದೆ ಭೀಮ ನೃಪಾಲನು ಮಗಳು ದಮಯಂತಿಗೆ ವಿಶೇಷ ಉಡುಗೊರೆಯೊಂದಿಗೆ ಕಳುಹಿಸಿಕೊಡುವ ಸಂದರ್ಭ,

ಮಗಳಿಗಿತ್ತನು ವಸ್ತುವಾಹನ ।
ಅಗಣಿತದ ಮಣಿರತ್ನಭೂಷಣ ।

ಹೆಣ್ಣು ಮಗಳನ್ನು ವಿವಾಹ ಮಾಡಿಕೊಡುವ ಹಾಗೂ ವಿವಾಹವಾಗಿ ತೆರುವಲ್ಲಿ ರೂಢಿಗತವಾದ ಸಂಪ್ರದಾಯವನ್ನು ಈ ಪೌರಾಣಿಕ ಪ್ರಸಂಗಗಳಲ್ಲಿ ಯಕ್ಷಗಾನ ಕವಿಗಳು ಪ್ರಸ್ತಾಪಿಸುವ ಮೂಲಕ ಸಮಕಾಲೀನ ಕೌಟುಂಬಿಕ ಚಿತ್ರಣಗಳನ್ನು ನೀಡಿದ್ದಾರೆ. ವಿವಾಹವಾಗಿ ಗಂಡನ ಮನೆಗೆ ಹೋಗುವಾಗ ತವರು ಮನೆಯಿಂದ ಒಡವೆ, ಕೆಲವು ವಿಶೇಷ ವಸ್ತುಗಳನ್ನು ಕಳುಹಿಸಿಕೊಡುವ ಸಂಪ್ರದಾಯವಿತ್ತು. ಇಂತಹ ಸನ್ನಿವೇಶವು ಈ ಪ್ರಸಂಗದಲ್ಲಿ ಚಿತ್ರಿತವಾಗಿರುವುದನ್ನು ಕಾಣಬಹುದು.

ಬಂದ ಹೆಣ್ಣಿಗೆ ಸಂಕಷ್ಟಗಳನ್ನು ಕೊಡಬಾರದೆಂಬ ವಿಚಾರವು ಹಲವು ಪ್ರಸಂಗಗಳಲ್ಲಿ ವ್ಯಕ್ತವಾಗುತ್ತದೆ.

ಶ್ರೀರಾಮ ಪಟ್ಟಾಭಿಷೇಕ ಪ್ರಸಂಗದಲ್ಲಿ ರಾಮ ಕಾಡಿಗೆ ಹೋಗುವುದರಿಂದ ಸೀತೆಗೆ ಆಗುವ ಅಪಚಾರವನ್ನು ರಾಮನ ತಾಯಿ ಕೌಸಲ್ಯ ಹೀಗೆ ಹೇಳುತ್ತಾರೆ,

> 'ನಿನ್ನ । ಕೈವಿಡಿದ ।
> ಮಾನಿನಿಗಿನ್ನೇನೋ ಗತಿಯೋ । ರಾಮ ರಾಮ ॥

ಎಂದು ಹೇಳುತ್ತಾರೆ. ಇಲ್ಲಿ ಸೊಸೆಯ ಬಗೆಗಿನ ಕಾಳಜಿಯನ್ನು ಕಾಣಬಹುದಾಗಿದೆ. ಹೀಗೆ ಕೆಲವು ರೂಢಿಗತ ಮೌಲ್ಯಗಳು ಪ್ರಸಂಗ ಸಾಹಿತ್ಯದಲ್ಲಿ ದೊರೆಯುತ್ತದೆ.

**ಮಹಿಳೆಯ ಸ್ಥಾನಮಾನ**

ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯ ಸ್ಥಾನಮಾನ ಪ್ರಮುಖವಾಗಿರುತ್ತದೆ. ಗ್ರಾಮೀಣ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯ ಸ್ಥಾನ ತೀರ ಶೋಚನೀಯವಾಗಿರುವುದನ್ನೂ ಕಾಣಬಹುದು. ಆಕೆ ಪಡುವ ಸಂಕಷ್ಟಗಳೊಂದಿಗೆ ಜೀವನ ನಡೆಸುತ್ತಾಳೆ. ಯಕ್ಷಗಾನ ಪ್ರಸಂಗದಲ್ಲಿ ಸ್ತ್ರೀಪಾತ್ರಗಳ ಮೂಲಕ ವಿಷಾದದ ಉದ್ಗಾರಗಳನ್ನು ಗಮನಿಸಬಹುದಾಗಿದೆ.

ವಸುಂಧರಾತ್ಮಜೆ ಪ್ರಸಂಗದಲ್ಲಿ ಗರ್ಭಿಣಿಯಾದ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬಂದ ಸನ್ನಿವೇಶ

> ಮಡದಿಯ ಕಾಯುವ ಪತಿದೇವ ತೊರೆದರೆ ।
> ಪೊಡವಿಯೊಳ್ ಬದುಕುವುದೇಕೆ ।
> ಜಡಜಸಂಭವನೇಕೆ ಹಣೆಯಲಿ ಬರೆದನು ।
> ತಡೆಯದ ಕಷ್ಟವಿದೇಕೆ ॥

ಇಲ್ಲಿ ಸೀತೆಯು ಹೆಣ್ಣು ಜನ್ಮದಲ್ಲಿ ಹುಟ್ಟಿ ಬೆಳೆದು ತನಗಾದ ಸಂಕಷ್ಟದ ಬಗ್ಗೆ ವಿಷಾದ ಹಾಗೂ ನೋವಿನಿಂದ ಮರುಗುವ ಸನ್ನಿವೇಶವನ್ನು ಕಾಣಬಹುದು. ಹೀಗೆ ಮಹಿಳೆಯರ ಒಳದ್ವನಿ ಹಲವು ಪ್ರಸಂಗಗಳಲ್ಲಿ ಪ್ರತಿಧ್ವನಿಸುವುದನ್ನು ಕಾಣಬಹುದು.

ಕುಟುಂಬದಲ್ಲಿ ತಾಯಿಯ ಪಾತ್ರವು ಮಹತ್ತರವಾದುದು. ಮಕ್ಕಳ ಲಾಲನೆ, ಪಾಲನೆ, ಪೋಷಣೆಯಲ್ಲಿ ಆಕೆಯ ಸ್ಥಾನವು ಹಿರಿದಾದುದು. ದಾರಿದ್ರ್ಯತನದಲ್ಲಿಯೂ ದ್ರೋಣರ ಪತ್ನಿ ಮಗ ಅಶ್ವತ್ಥಾಮನನ್ನು ಸಂತೈಸುವ ಸನ್ನಿವೇಶವು 'ಉಭಯ ಬಿಲ್ಗೋಳ' ಪ್ರಸಂಗದಲ್ಲಿ ಚಿತ್ರಿತವಾಗಿದೆ.

> ಬಾಲನೀ ತೆರ ಕಾಡುತಿರಲಾ । ಬಾಲೆ ಮರುಗಿದಳಕಟ ಕಂದಗೆ ।
> ಹಾಲನೀವನೆ ಸುರಭಿಯಿಲ್ಲವು ಸಂತವಿಪೆನೆಂತು ॥
> ವ್ಯಾಳ ಶಯನನೆ ಗತಿಯೆನುತಲಾ । ಬಾಲಗಿತ್ತಳು ಹಿಟ್ಟ ಕಲಸುತ ।
> ಹಾಲೆನುಲತಿ ಮುದದಿ ಕುಡಿದನು ಮುಗ್ಧ ಬಾಲಕನು

ಇಲ್ಲಿ ಅಶ್ವತ್ಥಾಮನಿಗೆ ಹಾಲನ್ನು ಕುಡಿಯುವ ಬಯಕೆಯಾಗುತ್ತದೆ. ತನ್ನ ಆಸೆಯನ್ನು ತಾಯಿಯಲ್ಲಿ ಹೇಳಿದಾಗ ಬಡತನದಿಂದಾಗಿ ಮನೆಯಲ್ಲಿ ಹಾಲು ಕೂಡ ಇರುವುದಿಲ್ಲ. ಆತನನ್ನು ಸಂತೈಸುವ ಸಲುವಾಗಿ ಆಕೆಯು ಅಕ್ಕಿ ಹಿಟ್ಟಿಗೆ ನೀರು ಸೇರಿಸಿ ಬೆಲ್ಲ ಕಲಸಿ ಹಾಲೆಂದು ನೀಡಿ ಆತನನ್ನು ಸಂತೈಸಲು ಮಾಡುವ ಪ್ರಯತ್ನವನ್ನು ಈ ಪ್ರಸಂಗದಲ್ಲಿ ಕಾಣಬಹುದು.

ಕುಟುಂಬದ ರೀತಿ ರಿವಾಜುಗಳಿಗೆ ಬೆಲೆ ಕೊಟ್ಟು ನಡೆದು ಬಂದಿರುವ ಹಾದಿಯನ್ನು ಅನೇಕ ಯಕ್ಷಗಾನ ಪ್ರಸಂಗಸಾಹಿತ್ಯದಲ್ಲಿ ಕಾಣಬಹುದಾಗಿದ್ದು, ಅಲ್ಲದೆ ಇಂತಹ ಸಾಹಿತ್ಯದಲ್ಲಿ ಚಿತ್ರಿತವಾದ ವಿಷಯಗಳನ್ನು ಕಲಾವಿದರು ರಂಗದಲ್ಲಿ ಪಸ್ತುತ ಪಡಿಸಿ ಅದಕ್ಕೊಂದು ವಿಶೇಷವಾದ ಮೌಲ್ಯ ಒದಗುವಂತೆ ಮಾಡುತ್ತಾರೆ.

ಹೀಗೆ ಯಕ್ಷಗಾನಗಳಲ್ಲಿ ಕುಟುಂಬದ ಹಲವಾರು ವ್ಯವಸ್ಥೆ, ಮೌಲ್ಯಗಳು, ರೀತಿ ರೀವಾಜುಗಳು, ಸಮಾಜದಲ್ಲಿ ಊಳಿಗಮಾನ್ಯ ಪದ್ಧತಿ, ಮಹಿಳೆಯರ ಸ್ಥಾನಮಾನ ಸೇರಿದಂತೆ ಕುಟುಂಬದಲ್ಲಿ ನಡೆಯುವ ಆರ್ಥಿಕ ವ್ಯವಹಾರ ಮತ್ತು ಸಂಘರ್ಷಗಳ ಚಿತ್ರಣಗಳನ್ನು ಕಾಣಬಹುದಾಗಿದೆ.

ಗ್ರಾಮೀಣ ಕುಟುಂಬಗಳಲ್ಲಿ ನಡೆಯುವ ವಿಶೇಷ ಸಮಾರಂಭಗಳು ಹಾಗೂ ಕುಟುಂಬಗಳ ಸದಸ್ಯರುಗಳ ನಡುವೆ ಎಷ್ಟೇ ಒಳಜಗಳಗಳಿದ್ದರೂ ಕೆಲವು ವಿಶೇಷ ಕಟ್ಟಲೆಗಳಿಗೆ ಎಲ್ಲರೂ ಒಂದಾಗುತ್ತಾರೆ. ಕಾರ್ಯಕ್ರಮಗಳಲ್ಲಿ ಎಲ್ಲಾ ಅಸೂಯೆಗಳನ್ನು ಮರೆತು ಒಂದೊಂದು ಕಾರ್ಯಗಳನ್ನು ಕೈಗೆತ್ತಿಕೊಂಡು ಸಮಾರಂಭ ಸುಸೂತ್ರವಾಗಿ ನಡೆಯುವಂತೆ ನೋಡುತ್ತಾರೆ. ಅಲ್ಲದೆ ನಂಟರನ್ನು ನೋಡಿಕೊಳ್ಳುವ ಬಗೆ, ಕುಟುಂಬದ ಹಿರಿಯನಾದವನು ನಡೆದುಕೊಳ್ಳುವ ರೀತಿ ಜವಬ್ದಾರಿ ಮೊದಲಾದವುಗಳು ಹಲವು ಯಕ್ಷಗಾನ ಪ್ರಸಂಗದಲ್ಲಿ ಪ್ರಸ್ತುತವಾಗುತ್ತಿರುವುದನ್ನು ಕಾಣಬಹುದು.

ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಕುಟುಂಬಗಳಲ್ಲಿ ದೈವ ಆರಾಧನೆಗೆ ವಿಶೇಷವಾದ ಮಹತ್ವವಿದೆ. ಅಲ್ಲದೆ ಮನೆ ದೇವರುಗಳ ಬಗ್ಗೆ ವಿಶೇಷವಾದ ನಂಬಿಕೆಯನ್ನು ಇಟ್ಟುಕೊಂಡಿರುತ್ತಾರೆ. ಇಂತಹ ನಂಬಿಕೆಗಳಲ್ಲಿ ಹಿರಿಯ ಸದಸ್ಯರ ಕರ್ತವ್ಯಗಳು ಮತ್ತು ಯಾವುದೇ ಕಾರ್ಯಕ್ಕೆ ಹೊರಡುವ ಮುಂಚೆ ದೈವ ದೇವರುಗಳಲ್ಲಿ ಪ್ರಾರ್ಥನೆಯನ್ನು ಸಲ್ಲಿಸುವ ಅಂಶಗಳ ಬಗ್ಗೆ ಕೆಲವೊಂದು ಪ್ರಸಂಗದಲ್ಲಿ ವರ್ಣಿತವಾಗಿರುವುದನ್ನು ಕಾಣಬಹುದು. ಹಾಗೆಯೇ ಮಕ್ಕಳ ಪೋಷಣೆ, ಮಕ್ಕಳ ಲಾಲನೆಯಲ್ಲಿ ತಾಯಿಯ ಕರ್ತವ್ಯಗಳು, ಮನೆಗೆ ಬಂದವರನ್ನು ಪ್ರೀತಿಯಿಂದ ಕರೆದು ಆದರಿಸುವ, ಸತ್ಕರಿಸುವ ನಮ್ಮ ಕುಟುಂಬದ ಮಾದರಿಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ಹೀಗೆ ಕುಟುಂಬದ ಹಲವಾರು ಸಂಗತಿಗಳು ಯಕ್ಷಗಾನ ಪ್ರಸಂಗದ ಮೂಲಕ ಪ್ರಸ್ತುತವಾಗುತ್ತದೆ. ರಂಗದಲ್ಲಿ ಪಾತ್ರಗಳು ಪೌರಾಣಿಕ ಲೋಕದವುಗಳಾದರೂ ಅವುಗಳ ನಡವಳಿಕೆ, ಮನೋಧರ್ಮ ಸ್ವಭಾವಗಳೆಲ್ಲಲ್ಲ ಸಮಕಾಲೀನ ಅಂಶಗಳನ್ನು ಕೆಲವೊಮ್ಮೆ ತೆರಲಾಗುತ್ತದೆ. ಇದರಿಂದಾಗಿ ಎಷ್ಟೋ ಸಂದರ್ಭದಲ್ಲಿ ಕಲಾವಿದರ ಪಾತ್ರಗಳು ಜನಸಾಮಾನ್ಯರ ಬದುಕಿಗೆ ಬಹಳ ಹತ್ತಿರವಾಗಿ ಕಾಣುತ್ತದೆ. ಅಲ್ಲದೆ ಯಕ್ಷಗಾನದಲ್ಲಿ ಚಿತ್ರಿತವಾಗಿರುವ ಹಲವಾರು ವಿವರಣೆಗಳು ನಮ್ಮ ಕುಟುಂಬದ ನಮ್ಮ ಸಂಸ್ಕೃತಿಯ ಸೂಕ್ಷ್ಮತೆಗಳನ್ನು ಪರಿಚಯಿಸುತ್ತದೆ. ಅಲ್ಲದೆ ತಮ್ಮ ಬದುಕಿನಲ್ಲಿ ಹಲವಾರು ಸಂದರ್ಭಗಳಲ್ಲಿ ಎದುರಾಗುವ ಕಷ್ಟ ನಷ್ಟಗಳನ್ನು ಅಥವಾ ಕುಟುಂಬದ ಜವಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಕ್ಷಗಾನ ಕಾರಣವಾಗುವುದನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ವಿಶ್ಲೇಷಿಸಬಹುದಾಗಿದೆ.